

# ಕಾಡುವ ಇತಿಹಾಸದ ಹಾಡು ಗುನುಗುವ

# ಬಸದಿಹಳ್ಳಿ

**ಹಳೇಬೀಡಿಗೆ ಸಮೀಪದ ಜೈನ ಬಸದಿಗಳು ಹೊಯ್ಸಳರ ಕಾಲದ ಶಿಲ್ಪಕಲೆಯ ಔನ್ನತ್ಯವನ್ನು ಕಲಾಸಕ್ತರಿಗೆ ಮನಗಾಣಿಸುವಂತಿವೆ. ಧಾರ್ಮಿಕ ಮಹತ್ವವನ್ನೂ ಹೊಂದಿರುವ ಈ ಬಸದಿಗಳು, ಮೌನದಲ್ಲೇ ಇತಿಹಾಸದ ಹಲವು ಕಥನಗಳನ್ನು ನೋಡುಗರಿಗೆ ದಾಟಿಸುವಂತಿವೆ.**

**ಪ್ರಸಾದ ಶೆಣೈ ಕಾರ್ಕಳ**

ಮಲೆನಾಡಿನಲ್ಲಿ ಮಳೆಗಾಲ ಆರಂಭವಾಗಿ ಅದಾಗಲೇ ತಿಂಗಳಾಗಿತ್ತು. ಮಲೆನಾಡಿನ ಮಳೆಯಲ್ಲಿ ಸಣ್ಣಗೇ ನೆನೆದು ದಾರಿ ಸಾಗುತ್ತ, ಬಯಲುಸೀಮೆಯ ಐತಿಹಾಸಿಕ ಬೀಡಾದ ಹಾಸನ ಜಿಲ್ಲೆಯ ಹಳೇಬೀಡಿನ ಮೂಲೆ ಮೂಲೆಗಳಲ್ಲೂ ಕಳೆದುಹೋಗಬೇಕು. ಹಳೇಬೀಡಿನ ಬಿಸಿಲ ಬೊಗಸೆಯಲ್ಲಿ ಕೂತಂತೆ ಹೊಳೆಯುವ ಕಲ್ಲು ಕಲ್ಲಿನಲ್ಲಿಯೂ ಹೊಮ್ಮಿಬರುವ ಕನ್ನಡನಾಡಿನ ಇತಿಹಾಸದ ಮಧುರಗೀತೆಯನ್ನು ಕೇಳುತ್ತ, ಹೊಯ್ಸಳರ ಧೀರೋದಾತ್ತ ಕಥನಗಳನ್ನು ಮೆಲುಕು ಹಾಕಬೇಕು ಎನ್ನುವ ಆಸೆಯಿಂದ ಹಳೇಬೀಡಿನ ದಾರಿ ಹಿಡಿದೆವು.

ಹೊಯ್ಸಳರ ಆಡುಂಬೊಲವಾದ ಹಳೇಬೀಡಿನ ಹೊಯ್ಸಳೇಶ್ವರ ದೇವಸ್ಥಾನ, ಕೇದಾರೇಶ್ವರ ದೇವಸ್ಥಾನ ಮೊದಲಾದ ಐತಿಹಾಸಿಕ ತಾಣಗಳ

